# <u>ಮುಖ್ಯ ನ್ಯಾಯಿಕ ದಂಡಾಧಿಕಾರಿಗಳವರ ನ್ಯಾಯಾಲಯ, ಯಾದಗಿರಿ</u>

## <u>ಸಿ.ಸಿ. ನಂ. **163 / 2019**</u>

ಸಿಡಬ್ಲ್ಯೂ- **3**
ಪಿಡಬ್ಲ್ಯೂ- **3**

<u>ದಿನಾಂಕಃ **18.06.2026.**</u>

<u>ಸಾಕ್ಷಿಗೆ ಸತ್ಯ ಪ್ರತಿಜ್ಞೆ ಬೋಧಿಸಲಾಯಿತು</u>

| | | |
|---|---|---|
| ಸಾಕ್ಷಿಯ ಹೆಸರುಃ | - | ಬಂದಪ್ಪ |
| ತಂದೆಯ/ಗಂಡನ ಹೆಸರುಃ | - | ಶರಣಪ್ಪ |
| ವಯಸ್ಸುಃ | - | **46** ವರ್ಷ |
| ಉದ್ಯೋಗಃ | - | ಖಾಸಗಿ ಕೆಲಸ. |
| ವಾಸಸ್ಥಳಃ | - | ಯಾದಗಿರಿ. |

<u>ಮುಖ್ಯ ವಿಚಾರಣೆಃ ಸ.ಸ.ಅ. ರವರಿಂದಃ</u>

ಚಾಸಾ-1 ಮತ್ತು 2 ರವರ ಪರಿಚಯ ನನಗೆ ಇರುತ್ತದೆ. ದಿನಾಂಕಃ 02.08.2019 ರಂದು ನನ್ನ ಹಾಗೂ ಚಾಸಾ-2 ರವರನ್ನು ಪೊಲೀಸರು ಚಾಸಾ-1 ರವರ ಮನೆಗೆ ಕರೆದುಕೊಂಡು ಹೋಗಿ ಸಹಿ ಮಾಡಿಸಿಕೊಂಡಿದ್ದರು. ಸಾಕ್ಷಿಯು ತಾನು ಸಹಿ ಮಾಡಿದ ದಾಖಲೆಗಳನ್ನು ನೋಡಿ ಗುರುತಿಸಿದ್ದು ಅದನ್ನು ಈಗಾಗಲೇ ನಿಪಿ 2 ಎಂದು ಗುರುತಿಸಲಾಗಿರುತ್ತದೆ. ಅದರ ಮೇಲೆ ಇರುವ ತನ್ನ ಸಹಿಯನ್ನು ನೋಡಿ ಗುರುತಿಸಿದ್ದು ಅದನ್ನು ನಿಪಿ 2(ಸಿ) ಎಂದು ಗುರುತಿಸಲಾಯಿತು. ಸಾಕ್ಷಿಯು ತಾನು ಇರುವ 4 ಭಾವಚಿತ್ರಗಳನ್ನು ನೋಡಿ ಗುರುತಿಸಿದ್ದು ಅವುಗಳನ್ನು ಈಗಾಗಲೇ ನಿಪಿ 3 ರಿಂದ 6 ಎಂದು ಗುರುತಿಸಲಾಗಿರುತ್ತದೆ. ಮತ್ತೇ ಏನು ಮಾಡಿರುವುದಿಲ್ಲ. ನಿಪಿ 2 ರಲ್ಲಿ ಬರೆದಿರುವ ವಿಷಯ ನನಗೆ ಗೊತ್ತಿರುವುದಿಲ್ಲ.

(ಈ ಹಂತದಲ್ಲಿ ಸಾಕ್ಷಿಯು ಪ್ರತಿಕೂಲಕರ ಸಾಕ್ಷ್ಯವನ್ನು ನುಡಿದ ಕಾರಣ ಸ.ಸ.ಅಭಿಯೋಜಕರವರು ಪಾಟೀ ಸವಾಲು ಮಾಡಲು ಅನುಮತಿ ಕೋರಿರುತ್ತಾರೆ. )

<u>ಪಾಟೀ ಸವಾಲುಃ ಸ.ಸ.ಅ ರವರಿಂದಃ</u>

ದಿನಾಂಕಃ 03.07.2019 ರಂದು ಬೆಳಗ್ಗೆ 10-00 ಗಂಟೆಯಿಂದ 11-00 ಗಂಟೆಯ ವರೇಗೆ ನನ್ನನ್ನು ಹಾಗೂ ಚಾಸಾ-2 ರವರನ್ನು ಚಾಸಾ-1 ರವರ ಮನೆಗೆ ಕರೆದುಕೊಂಡು ಹೋಗಿ ನಿಪಿ 2 ರಂತೆ ಗುನ್ನಾ ಸ್ಥಳದ ಪಂಚನಾಮೆಯನ್ನು ಮಾಡಿ ನಿಪಿ 3 ರಿಂದ 6 ನ್ನು ಪಡೆದಿದ್ದರು ಎಂದರೆ ಸರಿಯಲ್ಲ. ಅದೇ ರೀತಿ ಎರಡು ರಾಡ್ ಗಳು, ಎರಡು ಸ್ಕ್ರೂಡ್ರೈವರ್ ಗಳು ಮತ್ತು ಒಂದು ಕಪ್ಪುಕೆಂಪು ಬಣ್ಣದ ಬ್ಯಾಗನ್ನು ಜಪ್ತಿಪಡಿಸಿಕೊಂಡಿದರು ಎಂದರೆ ಸರಿಯಲ್ಲ. ನಿಪಿ 2 ರಲ್ಲಿ ಬರೆದಿರುವ ವಿಷಯಗಳನ್ನು

ನಮ್ಮಗೆ ಓದಿ ಹೇಳಿದ ನಂತರ ನಮ್ಮ ಸಹಿಗಳನ್ನು ಪಡೆದಿದ್ದರು ಎಂದರೆ ಸರಿಯಲ್ಲ. ರೋಪಿತನಿಗೆ ಸಹಾಯ ಮಾಡಲು ನಾನು ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆಂದರೆ ಸರಿಯಲ್ಲ.

ಪಾಟೀ ಸವಾಲುಃ ಆರೋಪಿ ಪರ ವಕೀಲರಾದ ಶ್ರೀ.ಎಸ್.ವೈ.ಎಂ. ರವರಿಂದಃ

ಆರೋಪಿ ಪರ ವಕೀಲರು ಪಾಟೀ ಸವಾಲು ಇಲ್ಲ ಎಂದು ಹೇಳಿರುತ್ತಾರೆ.

<u>ಮರು ವಿಚಾರಣೆಃ ಇಲ್ಲಃ</u>

( ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚುಗಾರನಿಂದ ಬೆರಳಚ್ಚು ಮಾಡಿಸಲಾಯಿತು)

ಓ. ಹೇ. ಕೇ. ಸರಿ ಅದೆ.

ಮುಖ್ಯ ನ್ಯಾಯಿಕ ದಂಡಾಧಿಕಾರಿಗಳು,
ಯಾದಗಿರಿ.